ಹೇಗೆ ಸಾಧ್ಯವಾಯಿತು? ನಮ್ಮ ಪ್ರಾಚೀನರಲ್ಲಿ ರಂಭೆ, ಮೇನಕೆಯರಿಂದ ತಪೋಭಂಗವನನುಭವಿಸಿದ ಪುಂಗವರಿದ್ದಾರೆ... ಆದರೆ ಹೆಣ್ಣು ಅನಾಫೆಲೀಸಳಿಂದ ಅನಾಮತ್ತಾಗಿ ಭಂಗಗೊಂಡ ಒಬ್ಬನೇ ಒಬ್ಬ ವಿಶ್ವಾಮಿತ್ರನಿದ್ದಾನೆಯೇ? ದ್ವಾಪರದ ಕಾಲದಲ್ಲೂ, ಹಳಸಿದ ರಕ್ತದ ನಡುವೆ ಬಿಸಿರಕ್ತ ಹುಡುಕಿಕೊಂಡು ಬಂದು, ಶರಶಯ್ಯೆಯಲ್ಲಿ ಮಲಗಿದ ಬ್ರಹ್ಮಚಾರಿ ಭೀಷ್ಮರನ್ನು ಈ ಹೆಣ್ಣುಗಳು ಕಾಡಿದ ಉಲ್ಲೇಖಗಳಿಲ್ಲ. ಆ ರೀತಿ ಕಾಡಿದ್ದರೆ ಅರ್ಜುನ ಬಾಣಕ್ಕೆ ಬಾಣ ತಾಗಿಸಿ ಬೆಂಕಿ ಮಾಡಿ ಹೊಗೆ ಎಬ್ಬಿಸುತ್ತಿದ್ದನೇನೋ...

ಹೀಗೆಲ್ಲ ಲಹರಿಯನ್ನು ಹರಿಯಬಿಡುತ್ತಾ ಹೆಗಲಿಗೆ ಬ್ಯಾಗು ಸಿಕ್ಕಿಸಿಕೊಂಡು ತಲೆಬಗ್ಗಿಸಿ ನೆಲ ನೋಡುತ್ತಾ (ತಲೆಬಗ್ಗಿಸಿದ ಮೇಲೆ ನೆಲವನ್ನೇ ನೋಡಬೇಕಲ್ಲದೆ ಆಕಾಶ ಕಾಣುವುದೇ?) ಬೆಳಗ್ಗಿನ ಎಂಟುಗಂಟೆಯ ಬಿಸಿಲಿನಲ್ಲಿ ನಡೆಯುತ್ತಿದ್ದೆ. ಎದುರಿಗೆ 'ಏನಮ್ಮಾ ಹೇಗಿದ್ದೀಯಾ?' ಎಂಬ ಸ್ವರ ಕೇಳಿತು. ನೆಲದ ಕಡೆ ಇದ್ದ ತಲೆ ಮೇಲೇರಿತು. 'ಓ ರಾಜರಾಮ ಭಟ್ರು... ಪ್ರಸಿದ್ಧ ವಾಸ್ತುತಜ್ಞರು' ಒಂದೇ ಉಸಿರಿನಲ್ಲಿ ಪ್ರವರ ಒಪ್ಪಿಸಿದೆ. 'ಎಲ್ಲಾ ಸೌಖ್ಯವೇ...' ಎಂದರು ತಮ್ಮ ಮಾಮೂಲಿ ಧಾಟಿಯಲ್ಲಿ. 'ಹಾಹಾ ಸೌಖ್ಯವೆ...' ಎಂದೆ ಮುಖವನ್ನು ಎರಡು ಕೈಗಳಿಂದ ತುರಿಸಿಕೊಳ್ಳುತ್ತಾ. ನನ್ನ ಮುಖವನ್ನು ನೋಡಿದ ಅವರು ಕೂಡಲೇ, 'ಇದೇನು ಮುಖದಲ್ಲಿ ಇಷ್ಟೊಂದು ಕಜ್ಜಿಯಾಗಿದೆ ಚಿಕನ್ ಪಾಕ್ಸಾ?...' ಎಂದರು. 'ಚಿಕನ್ನೂ, ಮಟನ್ನೂ, ಫಾಕ್ಸ್ ಯಾವುದೂ ಅಲ್ಲ...' ಅಂದೆ ಪುನಃ ಮುಖವನ್ನು ಕೆರೆದುಕೊಳ್ಳುತ್ತಾ. 'ಹಾಗಿದ್ರೆ ಜರ್ಮನ್ ಪಾಕ್ಸ್ ಇರ್ಬಹುದೇನೋ...' 'ಜರ್ಮನ್ನೂ ಅಲ್ಲ... ಬರ್ಮನ್ನೂ ಅಲ್ಲ ಇದು ನಮ್ಮ ಲೋಕಲ್ ಮಸ್ಕಿಟೋ ಎಂಬ ಕೀಟೋ ಫಾಕ್ಸ್... ದೊಡ್ಡ ದೊಡ್ಡ ಕಿಟಕಿ ಬಾಗಿಲುಗಳು ಬೇಕು ಅಂತ ಇರಿಸಿ, ಈಗ ಗಾಳಿ ಬೆಳಕಿನ ಜೊತೆ ಇದೂ ಒಳಗೆ ಬಂದು... ಒಂದು ದಿನವೂ ನೆಮ್ಮದಿಯಿಂದ ನಿದ್ದೆ ಮಾಡದ ಹಾಗೆ ಮಾಡಿದೆ...' ಎಂದೆ ಮ್ಲಾನವದನದಿಂದ. 'ವಾಸ್ತು ಎಲ್ಲಾ ಸರಿಯಾಗೇ ಇದೆಯಲ್ಲಾ... ಮತ್ತೆ ಯಾಕೆ ನಿದ್ದೆ ಬರ್ತಾ ಇಲ್ಲ?... ಉತ್ತರಕ್ಕೆ ತಲೆ ಹಾಕ್ತಿಲ್ಲ ತಾನೇ?' ಎಂದು ನನ್ನ ಉತ್ತರಕ್ಕೆ ಕಾಯದೆ ಯೋಚಿಸುತ್ತಾ ನಿಂತರು. ನನಗೆ ತಡವಾಗುತ್ತಿತ್ತು. ಪದೇಪದೇ ವಾಚು ನೋಡುತ್ತಿದ್ದುದು ಅವರ ಗಮನಕ್ಕೂ ಬಂತು. ತಮ್ಮ ಚೀಲದಿಂದ ಒಂದು ಪುಡಿಯನ್ನು ತೆಗೆದು 'ನೋಡು ಇದನ್ನು ಮಣ್ಣಿನ ಹಣತೆಯಲ್ಲಿ ಹಾಕಿ ಅದಕ್ಕೆ ಎಳ್ಳೆಣ್ಣೆ ಸುರಿದು ದೀಪ ಹಚ್ಚು ಮತ್ತೆ ನಿದ್ರೆ ಬಂದರೆ... ಅಲ್ಲಲ್ಲ ಸೊಳ್ಳೆ ಬಂದರೆ ಕೇಳು' ಎಂದರು. ಅವರ ಅಳಿಯನಿಗೆ ಸ್ವದೇಶೀ ವಸ್ತುಗಳ ಅಂಗಡಿ ಇದ್ದುದು ಗೊತ್ತಿತ್ತು. 'ಈಗ ದುಡ್ಡು ಬೇಡ, ಮನೆಗೆ ಬರ್ತೇನೆ...' ಎಂದೂ ಹೇಳಿದರು.

ರಾಜರಾಮ ಭಟ್ರ ಪುಡಿ ಹಾಕಿ ಹಣತೆ ಉರಿಸಿದ್ದೂ ಆಯಿತು. ಅದರಿಂದಲೂ ಏನೇನು ಪ್ರಯೋಜನವಾಗಲಿಲ್ಲ. ಯಾವಾಗಿನಂತೆ ಆವತ್ತೂ ರಾತ್ರಿಯೆಲ್ಲ ಹೊರಳು, ಉರುಳುಗಳ ನಡು ನಡುವೆ ಮರಳು ಯಾ ತೆರಳು ಸೇವೆಗಳೂ ನಡೆದು, (ಹೊರಳಿ ಉರುಳಿ ಆದ ಮೇಲೆ ಸ್ವಸ್ಥಾನಕ್ಕೆ ಮರಳಲೇ ಬೇಕಲ್ಲ) ಜೊತೆ ಜೊತೆಗೆ ಚಪ್ಪಾಳೆ (ಸೊಳ್ಳೆಗಳ ನೆಪದಲ್ಲಿ ನಮಗೆ ನಾವೇ ಕೊಟ್ಟು ಕೊಳ್ಳುವ ತಪರಾಕಿ) ಸೇವೆಗಳೂ ಸಾಂಗವಾಗಿ ನಡೆದು, ನನ್ನ ಜಂಪಿಂಗಿಗೆ (ಮಂಚದಿಂದ ನೆಲಕ್ಕೆ ಲಾಂಗ್ ಜಂಪ್, ನೆಲದಿಂದ ಮೇಲಕ್ಕೆ ಹೈ ಜಂಪ್...) ಯಜಮಾನರ ಕ್ಲ್ಯಾಪಿಂಗೂ ಸೇರಿ... (ಮೆಚ್ಚುಗೆಯ ಚಪ್ಪಾಳೆ ಅಲ್ಲ ತಪ್ಪು ತಿಳೀಬೇಡಿ) ಹೀಗೆ ವಿಕಾಸವಾದದ ಪಳೆಯುಳಿಕೆಗಳೆಲ್ಲ ಬಾಲವೊಂದಿಲ್ಲದೆ ಪ್ರದರ್ಶಿತಗೊಂಡು ಪಾಳಿಯಲ್ಲಿ ಮುಂದುವರಿದು ಬೆಳಕು ಕಂಡಿತು. ಇದರ ಬದಲಿಗೆ 'ಒಂದು ದಳದ ಕಮಲದಲ್ಲಿ ಮೂಡಿ ಬಂದ... ಎಂದು ಆರಂಭಿಸಿ ಒಂದು ಸಾವಿರ ದಳದವರೆಗೆ ಭಜನೆಯನ್ನಾದರೂ ಮಾಡಿದ್ದರೆ ಒಂದು ಕೋಟಿ ಪುಣ್ಯವಾದರೂ ನನ್ನ ಖಾತೆಗೆ ಜಮೆಯಾಗುತ್ತಿತ್ತು' ಅಳುತ್ತಾ ಅಲವತ್ತುಕೊಂಡೆ. 'ಭಜನೆ ಯಾಕೆ? ಸೊಳ್ಳೆಗಳ ಗಾನಬಜಾನಕ್ಕೆ ನಮ್ಮ ತಾಲೀಬಜಾನಾ ಆಗಿದೆಯಲ್ಲ' ಎಂದ ಗಂಡನ ಮಾತು